Sta.

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 812 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಎಸ್.ವ್ಹಿ ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 26/07/2019 |
| ಉತ್ತರಿಸುವ ಸಚಿವರು | ಮಾನ್ಯ ವಸತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗದಗ ಜಿಲ್ಲೆಯ ನರೇಗಲ್ ಪಟ್ಟಣ ಪಂಚಾಯತಿಯ ದ್ಯಾಂಪೂರ ಹತ್ತಿರ ಪ್ರಧಾನಮಂತ್ರಿ ಅವಾಸ್ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಿ ವಿತರಿಸಲು ಯೋಜನೆಯನ್ನು ರೂಪಿಸಿದೆ, ಈ ಯೋಜನೆಗೆ ಎಷ್ಟು ಭೂಮಿಯನ್ನು ಯಾವಾಗ ಖರೀದಿಸಲಾಗಿದೆ; (ವಿವರ ನೀಡುವುದು) | ಗದಗ ಜಿಲ್ಲೆಯ ನರೇಗಲ್ ಪಟ್ಟಣ ಪಂಚಾಯತಿಯ ದ್ಯಾಂಪೂರ ಹತ್ತಿರ ಪ್ರಧಾನಮಂತ್ರಿ ಅವಾಸ್ ಯೋಜನೆಯಡಿ 1424 ಮನೆಗಳನ್ನು G+1 ಮಾದರಿಯಲ್ಲಿ ರೂ.85.08 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಿ ಫಲಾನುಭವಿಗಳಿಗೆ ವಿತರಿಸಲು ಯೋಜನೆಯನ್ನು ರೂಪಿಸಿದೆ,<br>ಈ ಯೋಜನೆಗೆ 39ಎ-23ಗುಂಟೆ ಭೂಮಿಯನ್ನು ಸನ್ 2012-13 ನೇ ಸಾಲಿನಲ್ಲಿ ಖರೀದಿಸಲಾಗಿದೆ. |
| ಆ) | ಪ್ರಧಾನ ಮಂತ್ರಿ ಅವಾಸ್ ಯೋಜನೆಗೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆಯೆ; ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು ; | ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ 1424 ಮನೆಗಳ ನಿರ್ಮಾಣಕ್ಕಾಗಿ ರೂ.85.08 ಕೋಟಿ ಅಂದಾಜು ವೆಚ್ಚದಲ್ಲಿ ಡಿ.ಪಿ.ಆರ್ (ಕ್ರಿಯಾ ಯೋಜನೆ) ಯನ್ನು ತಯಾರಿಸಲಾಗಿದ್ದು, ಇಧರಲ್ಲಿ ಕೇಂದ್ರ ಸರ್ಕಾರದ ಪಾಲು ರೂ.21.36 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು ರೂ.20.38 ಕೋಟಿಗಳಾಗಿದೆ.<br>ಪ್ರತಿ ಘಟಕದ ವೆಚ್ಚದಲ್ಲಿ ಕೇಂದ್ರದ ಪಾಲು ರೂ.1.5 ಲಕ್ಷ ಹಾಗೂ ರಾಜ್ಯದ ಪಾಲು ಸಾಮಾನ್ಯ ವರ್ಗದವರಿಗೆ ರೂ. 1.20 ಲಕ್ಷ SC/ST ವರ್ಗದವರಿಗೆ ರೂ. 2.00 ಲಕ್ಷಗಳಾಗಿವೆ. |
| ಇ) | ಈ ಯೋಜನೆಯಡಿ ಈಗಾಗಲೇ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ಮತ್ತು ಇನ್ನೂಳಿದ ಮನೆಗಳನ್ನು ಯಾವಾಗ ನಿರ್ಮಿಸಿ ಪೂರ್ಣಗೊಳಿಸಲಾಗುವುದು; | ಈ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಟೆಂಡರ ಕರೆಯುವ ಹಂತದಲ್ಲಿದೆ. |

| | | |
|---|---|---|
| ಈ) | ಈ ವಸತಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೆ; ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು) | ಈ ವಸತಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು ಮನೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ನಂತರ ಹಂಚಿಕೆ ಪತ್ರ ನೀಡಲು ಕ್ರಮವಹಿಸಲಾಗುವುದು. |

ವಇ 57 ಹೆಚ್‌ಎಫ್‌ಎ 2019

(ಸೋಮಣ್ಣ ವಿ.)
ವಸತಿ ಸಚಿವರು